ದಿನಾಂಕ: 19.12.2020 ರಂದು ಬೆಳಗ್ಗೆ 11.00 ಗಂಟೆಗೆ ಕಾಮಾಕ್ಷಿಪಾಳ್ಯ ವಾರ್ಡ್ ನಂ. 101 ರಲ್ಲಿ ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು:-**

1. ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿಗಳು
2. ಶ್ರೀ ನಾರಾಯಣಿ, ಸಹಾಯಕ ಅಭಿಯಂತರರು, ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ
3. ಶ್ರೀಮತಿ ರಾಜೇಶ್ವರಿ, ಹಿರಿಯ ಆರೋಗ್ಯ ಪರಿವೀಕ್ಷಕರು.
4. ಶ್ರೀಮತಿ ರೂಪಶ್ರೀ, ಕಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಶೇಖರ್ ನಾಯಕ್, ಸಹಾಯಕ ಅಭಿಯಂತರರು, ಬಿ.ಡ್ಬ್ಲ್ಯೂ.ಎಸ್.ಎಸ್.ಬಿ.
6. ಶ್ರೀ ತಿಮ್ಮರಾಜು, ಆರ್. ಪೋಲಿಸ್ ಇಲಾಖೆ,
7. ಶ್ರೀ ಮುರಳಿ.ವಿ.ಎನ್. ಬಿ.ಡ್ಬ್ಲ್ಯೂ.ಎಸ್.ಎಸ್.ಬಿ. ಬೋರ್ವೆಲ್
8. ಶ್ರೀ ರಘುನಾಥ್, ಸದಸ್ಯರು,
9. ಶ್ರೀ ರವೀಂದನಾಥ್, ಸದಸ್ಯರು,
10. ಶ್ರೀ ಅನಿಲ್ ರಂಗಣ್ಣ, ಸದಸ್ಯರು,
11. ಶ್ರೀ ಕೆ.ಉಮಾಶಂಕರ್, ಸದಸ್ಯರು,
12. ಶ್ರೀ ಎಲ್.ಜಿ. ಗಂಗಯ್ಯ, ಸದಸ್ಯರು
13. ಶ್ರೀ ಶ್ರೀನಿವಾಸ್.ಎ. ಸದಸ್ಯರು,
14. ಶ್ರೀ ರಾಜೇಶ್, ಮಾರ್ಷಲ್
15. ಶ್ರೀ ವಿನಾಯಕ ಸದಸ್ಯರು,
16. ಶ್ರೀ ಸುಬ್ರಮಣಿ, ಸದಸ್ಯರು

ದಿನಾಂಕ: 05.12.2020 ರಂದು ನಡೆದ ಸಭೆಯಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿ, ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಪರಿಹಾರ ತೆಗೆದುಕೊಳ್ಳಲಾಗಿರುತ್ತದೆ ಹಾಗು ದಿನಾಂಕ: 19.12.2020ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 101 ಕಾಮಾಕ್ಷಿಪಾಳ್ಯದ **ಕೇತಮಾರನಹಳ್ಳಿ ಸಮುಧಾಯ ಭವನ, ಶಾರದಾ ಕಾಲೊನಿ, ಕಾಮಾಕ್ಷಿಪಾಳ್ಯ** ಇಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ನೋಡಲ್ ಅಧಿಕಾರಿಗಳು ಸಭೆಯಲ್ಲಿ ಮಾತನಾಡುತ್ತಾ, ವಿನಾಯಕ ಬಡಾವಣೆಯಲ್ಲಿ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಒಳಚರಂಡಿಅಳವಡಿಸಲು ರಸ್ತೆ ಅಗೆತವನ್ನು ಮಾಡಿದ್ದು ಇದನ್ನು ಸರಿಯಾದ ಕ್ರಮದಲ್ಲಿ ಮರುಪೂರಣ ಮಾಡಿ ಗುಣಮಟ್ಟದಲ್ಲಿ ಕೆಲಸ ನಿರ್ವಹಿಸುವಂತೆ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ. ಸಹಾಯಕ ಅಭಿಯಂತರರಿಗೆ ಸೂಚಿಸಿದರು.
2. ಸಿದ್ದಯ್ಯ ಪುರಾಣಿಕ್ ರಸ್ತೆಯ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ ಯು-ಟರ್ನ್ ತೆಗೆದುಕೊಳ್ಳಲು ಕಷ್ಟವಾಗಿರುವುದರಿಂದ ಅದನ್ನು ಸರಿಪಡಿಸುವಂತೆ ಪ್ರಾಜೆಕ್ಟ್ ವಿಭಾಗ, [ಟೆಂಡರ್ ಶ್ಯೂರ್] ರವರಿಗೆ ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದ ಅನ್ವಯ ಟೆಂಡರ್ ಶ್ಯೂರ್ ರಸ್ತೆಯ ಸಹಾಯಕ ಅಭಿಯಂತರರು, ಸ್ಥಳಕ್ಕೆ ಭೇಟಿ ನೀಡಿ, ಪಾದಚಾರಿ ರಸ್ತೆಯನ್ನು ಸರಿ ಪಡಿಸಲು ಕ್ರಮವಹಿಸಲಾಗಿದ್ದು ಸಿದ್ದಯ್ಯ ಪುರಾಣಿಕ್ ರಸ್ತೆ ವಿಭಜಕವನ್ನು ಮುಂದಿನ ದಿನಗಳಲ್ಲಿ ಸರಿಪಡಿಸಲು ಟ್ರಾಫಿಕ್ ಪೋಲಿಸ್ ಇಲಾಖೆ ರವರಿಗೆ ತುರ್ತಾಗಿ ಗಮನ ಹರಿಸುವಂತೆ ತಿಳಿಸಿರುವುದಾಗಿ ವಿಂಗ್ ಕಮಾಂಡರ್ ಶ್ರೀ ರಘುನಾಥ್ ರವರಿಗೆ ತಿಳಿಸಿದರು.
3. ಬೆಸ್ಕಾಂ ಇಲಾಖೆಯವರು ಕೇಬಲ್ ಅಳವಡಿಸಲು ರಸ್ತೆ ಅಗೆತವನ್ನು ಮಾಡಿ, ಅದನ್ನು ಸರಿಯಾಗಿ ದುರಸ್ಥಿ ಮಾಡುವಂತೆ ಬೆಸ್ಕಾಂ ಇಲಾಖೆಯ ಅಭಿಯಂತರರಿಗೆ ಸೂಚಿಸಿದರು.
4. ಸದಸ್ಯರಾದ ಶ್ರೀ ಹರೀಶ್ ರವರು ಮಾತನಾಡುತ್ತಾ, ಹೈ ವೋಲ್ಟೇಜ್ ಸಮಸ್ಯೆ ಬಗ್ಗೆ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು. ಈ ಹೈ-ವೋಲ್ಟೇಜ್ ಸಮಸ್ಯೆಯನ್ನು ಬಗೆ ಹರಿಸುವಂತೆ ಬೆಸ್ಕಾಂ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
5. ಸದಸ್ಯರಾದ ಶ್ರೀ ಉಮೇಶ್ ರವರು ಮಾತನಾಡುತ್ತಾ, ವಿಶ್ವೇಶ್ವರಯ್ಯ ಪಾರ್ಕ್ ಶಾರದಾ ಕಾಲೋನಿಯಲ್ಲಿ ಕಸ ಸಂಗ್ರಹಣೆ ತುಂಬಾ ಇದ್ದು, ತುರ್ತಾಗಿ ಕಸ ವಿಲೇವಾರಿ ಮಾಡುವಂತೆ ಆರೋಗ್ಯ ಇಲಾಖೆಗೆ ತಿಳಿಸಿದರು. ವಿಶ್ವೇಶ್ವರಯ್ಯ ಪಾರ್ಕ್ ನಲ್ಲಿ ಗಿಡಗಳನ್ನು ಬೆಳೆಸುವಂತೆ ತೋಟಗಾರಿಕೆ ಇಲಾಖೆಯವರಿಗೆ ತಿಳಿಸಿದರು.
6. ಸದಸ್ಯರಾದ ವಿಂಗ್‌ಕಮಾಂಡರ್, ಶ್ರೀ ರಘುನಾಥ್ ರವರು ಮಾತನಾಡುತ್ತಾ ಬ್ಯಾಂಕ್ ಆಫ್ ಇಂಡಿಯಾ ಪಕ್ಕದ ಪಾದಚಾರಿ ರಸ್ತೆಯಲ್ಲಿ ವಾಹನಗಳನ್ನು ಅಡ್ಡ ದಿಡ್ಡಿಯಾಗಿ ನಿಲ್ಲಿಸುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು. ಅದರಂತೆ ನೋಡಲ್ ಅಧಿಕಾರಿಗಳು ಟ್ರಾಫಿಕ್ ಪೋಲಿಸ್ ಇಲಾಖೆ ರವರಿಗೆ ತುರ್ತಾಗಿ ಗಮನ ಹರಿಸುವಂತೆ ತಿಳಿಸಿದರು.

7. ರಸ್ತೆ ಬದಿಯಲ್ಲಿ ಬೆಳೆದಿರುವ ಮರಗಳ ರೆಂಬೆ–ಕೊಂಬೆಗಳನ್ನು ಕತ್ತರಿಸುವಂತೆ ಬಿ.ಬಿ.ಎಂ.ಪಿ ಅರಣ್ಯ ವಿಭಾಗದ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
8. ಶ್ರೀಮತಿ ರಾಜೇಶ್ವರಿ, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಹಸಿ ಕಸ ಮತ್ತು ಒಣಕಸದ ಬೇರ್ಪಡಿಸುವ ಬಗ್ಗೆ ಸಭೆಯಲ್ಲಿ ಮಾತನಾಡಿದರು, ಅದರಂತೆ ರಾಜಾಜಿನಗರ ವ್ಯಾಪ್ತಿಯ ಹಸಿಕಸ ಮತ್ತು ಒಣಕಸವನ್ನು ಸೀಗೆಹಳ್ಳಿ, ಕನ್ನಹಳ್ಳಿಗೆ ಸಾಗಿಸಿ, ಅಲ್ಲಿ ಗೊಬ್ಬರ ಮಾಡಿ ರೈತರಿಗೆ ಕಳುಹಿಸಲಾಗುತ್ತಿದೆ. ಎಂದು ಸಭೆಗೆ ತಿಳಿಸಿದರು. ಹಾಗು ಈ ಸೀಗೆಹಳ್ಳಿ, ಕನ್ನಹಳ್ಳಿಯಲ್ಲಿ ಆಧುನಿಕ ರೀತಿಯಲ್ಲಿ ಕುಡಿಯುವ ನೀರಿನ ಘಟಕ (ಆರೋ ಪ್ಲಾಂಟ್) ಸ್ಟ್ರೀಟ್ ಲೈಟ್ ಇತ್ಯಾದಿ ಸವಲತ್ತುಗಳನ್ನು ಬಿ.ಬಿ.ಎಂ.ಪಿ ವತಿಯಿಂದ ಅಳವಡಿಸಿ ನಿರ್ವಹಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.
9. ಸದಸ್ಯರಾದ ಶ್ರೀ ಅನಿಲ್ ರಂಗಣ್ಣ ಮಾತನಾಡುತ್ತಾ, ಗಾಡಿ ಮುದ್ದಣ್ಣ ರಸ್ತೆಯಲ್ಲಿ ಸಬ್‌ಲೈನ್ [ಪ್ರಾಜೆಕ್ಟ್] ಕಾಮಗಾರಿ ನಡೆಯುತ್ತಿದ್ದು, ಸದರಿ ಕಾಮಗಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಸಭೆಗೆ ತಿಳಿಸಿದರು. ಅದರಂತೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಯವರಿಗೆ ಮುಂದಿನ ದಿನಗಳಲ್ಲಿ ಉತ್ತಮ ಗುಣಮಟ್ಟವನ್ನು ಕಾಪಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.
10. ಸದಸ್ಯರಾದ ಎಸ್.ಬಿ.ಐ. ಅಸೋಸಿಯೇಷನ್ ರವರು ಮಾತನಾಡುತ್ತಾ ಬಿ.ಇ.ಎಂ.ಎಲ್. ಬಡಾವಣೆಯಲ್ಲಿ ಪಾದಚಾರಿ ರಸ್ತೆಗಳು ಉತ್ತಮವಾಗಿರುವಂತೆ ತಿಳಿಸಿದರು.
11. ಶಾರದಾ ಕಾಲೋನಿ ಮುಖ್ಯ ರಸ್ತೆಯಲ್ಲಿ ಮೋರ್ [ಶಾಪಿಂಗ್ ಮಾಲ್] ರವರು ಪಾದಚಾರಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದಾರೆ. ಇದಕ್ಕೆ ಸಂಬಂದಪಟ್ಟಂತೆ ಬಿ.ಬಿ.ಎಂ.ಪಿ.. ಅಧಿಕಾರಿಗಳು, ಸಂಚಾರಿ ಪೋಲಿಸ್ ಅಧಿಕಾರಿಗಳು ಮತ್ತು ಆರೋಗ್ಯಾ ಇಲಾಖೆ ಅಧಿಕಾರಿಗಳು ಸೇರಿ ಪಾದಚಾರಿ ಮಾರ್ಗವನ್ನು ತೆರವುಗೊಳಿಸಲು ಸೂಚಿಸಿದರು.
12. ಸದಸ್ಯರಾದ ಶ್ರೀ ಅನಿಲ್ ರಂಗಣ್ಣ ಮಾತನಾಡುತ್ತಾ, ವಿಶ್ವೇಶ್ವರಯ್ಯ ಪಾರ್ಕ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಗಳನ್ನು ನೇಮಿಸಿ, ಅವರ ಅವಧಿಯನ್ನು ಮುಂದುವರೆಸುವ ಬಗ್ಗೆ ತಿಳಿಸಿದರು. ಸಂಬಂಧಪಟ್ಟ ತೋಟಗಾರಿಕಾ ಇಲಾಖಾ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
13. ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ತುರ್ತಾಗಿ ಮುಚ್ಚುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
14. ಮಾನ್ಯ ಆಯುಕ್ತರ ಆದೇಶದಂತೆ, My City-My Budget ನಲ್ಲಿ ತಿಳಿಸಿರುವಂತೆ ಸಾರ್ವಜನಿಕ ಶೌಚಾಲಯಗಳ ನಿರ್ಮಾಣದ ಬಗ್ಗೆ ಸ್ಥಳದ ವಿವರ ಮತ್ತು ಸಲಹೆ ನೀಡುವಂತೆ ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಕೋರಿದರು.
15. ವಾರ್ಡ್ 101 ರ ವ್ಯಾಪ್ತಿಯ ಕೆರೆಗಳಿಗೆ ಸಂಬಂಧಿಸಿದಂತೆ, ಎನ್.ಜಿ.ಟಿ. ಆದೇಶದಂತೆ ಯಾವುದೇ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸದಂತೆ ನ್ಯಾಯಾಲದ ತಡೆಯಾಜ್ಞೆ ಇರುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
16. ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಪಶುಪಾಲನಾ ಇಲಾಖೆಯವರು ತುರ್ತಾಗಿ ಕ್ರಮ ವಹಿಸಿ ಸೂಕ್ತ ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.
17. ವಾರ್ಡ್ ವ್ಯಾಪ್ತಿಯ ಅಕ್ರಮ ಕಟ್ಟಡಗಳಿಗೆ ಸಂಬಂಧಿಸಿದಂತೆ ಕ್ರಮ ವಹಿಸುವಂತೆ ವಾರ್ಡ್ ಸಮಿತಿಯ ಸದಸ್ಯರು ತಿಳಿಸಿದರು. ಅದರಂತೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ವಾರ್ಡ್ ಅಭಿಯಂತರರಿಗೆ ಸೂಚಿಸಿದರು.
18. ವಾರ್ಡ್ ವ್ಯಾಪ್ತಿಯ ಕಾಂಡಿಮೆಂಟ್ಸ್‌ಗಳಲ್ಲಿ ಸಿಗರೇಟ್ ವ್ಯಾಪಾರ ನಡೆಯುತ್ತಿದ್ದು, ಸಿಗರೇಟ್ ಸೇವನೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸದಸ್ಯರು ಸಭೆಯಲ್ಲಿ ತಿಳಿಸಿದರು ಈ ಸಂಭಂದ ಹಾಜರಿದ್ದ ಪೋಲಿಸ್ ಅಧಿಕಾರಿಗಳಿಗೆ ಕ್ರಮ ವಹಿಸಿ ದಂಡ ವಿಧಿಸುವಂತೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 101

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 101